ಆ) ಈ ರಸ್ತೆಯು ಲೋಕೋಪಯೋಗಿ ಇಲಾಖೆಯ ರಸ್ತೆಯಾಗಿಲ್ಲದೇ ಇರುವುದರಿಂದ ಈ ಕಾಮಗಾರಿಯನ್ನು ಈ ಇಲಾಖೆಯಿಂದ ಕೈಗೊಂಡಿರುವುದಿಲ್ಲ.

ಇ) ಈ ಸೇತುವೆ ನಿರ್ಮಾಣವನ್ನು ನಬಾರ್ಡ್ ಸಾಲ ಸಹಾಯದಡಿ ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿದೆ. ಈ ಸೇತುವೆ ಕಾಮಗಾರಿಯನ್ನು ಆರ್‌ಐಡಿಎಫ್-9 ರಡಿ ಕೈಗೊಳ್ಳಲಾಗುವುದು.

ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ :– ಮಾನ್ಯ ಅಧ್ಯಕ್ಷರೆ, ನನ್ನ ಕುಂದಗೋಳ ತಾಲ್ಲೂಕಿನ ಯರೇಬೂದಿಹಾಳ ರಸ್ತೆಯ ನಡುವಿನ ಒಂದು ಬ್ರಿಜ್ 1999ರ ಅಕ್ಟೋಬರ್ ತಿಂಗಳಿನಲ್ಲಿ ಹೆಚ್ಚಿನ ಮಳೆಯಾಗಿ, ಅತಿವೃಷ್ಟಿಯಿಂದ ಕಿತ್ತು ಹೋಯಿತು. ಅದರಿಂದ ಸುಮಾರು 30 ಹಳ್ಳಿಯ ಜನರಿಗೆ ಸಂಪರ್ಕ ಕಡಿದುಹೋಗಿ ಬಹಳ ತೊಂದರೆಯಾಗಿದೆ. ಆ ಸಂದರ್ಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಎಸ್.ಎಂ. ಕೃಷ್ಣರವರೂ ಕೂಡ ಭೇಟಿ ಕೊಟ್ಟಿದ್ದರು. ಇವತ್ತಿಗೂ ಆ ಬ್ರಿಜ್ ಆಗಿಲ್ಲ. ಎಂ.ಡಿ.ಆರ್. ರಸ್ತೆಯಲ್ಲಿ ಸುಮಾರು ಆರು ಕಿ.ಮಿ. ರಸ್ತೆ ಬರುತ್ತದೆ. ಆ ರಸ್ತೆ ಮಾಡಿದರೆ ಸುಮಾರು ಹತ್ತು ಕಿ.ಮೀ. ಮೂವತ್ತು ಹಳ್ಳಿಗಳಿಗೆ ಉಳಿತಾಯವಾಗುತ್ತದೆ. ಆದ್ದರಿಂದ, ಆ ಸೇತುವೆಯನ್ನು ನನ್ನ ತಾಲ್ಲೂಕಿನ ಜನತೆಯ ಹಿತದೃಷ್ಟಿಯಿಂದ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ 30 ಹಳ್ಳಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸೇತುವೆಯ ನಿರ್ಮಾಣವಾಗಬೇಕಾಗಿದೆ. ಅದಕ್ಕೆ ನಾವು ಈಗಾಗಲೇ ಎಸ್ಟಿಮೇಟ್‌ನ್ನು ತರಿಸಿದ್ದೇವೆ. 1 ಕೋಟಿ 80 ಲಕ್ಷ ಆಗುತ್ತದೆ. ಅದನ್ನು ನಬಾರ್ಡ್ ಒಂಭತ್ತರಲ್ಲಿ ಸೇರಿಸುವ ಕೆಲಸವನ್ನು ಮಾಡುತ್ತೇವೆ.

ಶ್ರೀ ಜಗದೀಶ್‌ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಳ್ಳಿಯವರೇನು ಪ್ರಸ್ತಾಪಮಾಡಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಕುಂದಗೋಳ ತಾಲ್ಲೂಕಿಗೆ ಬಂದಿದ್ದರು. ಆ ಯರೇಬೂದಿಹಾಳ ರಸ್ತೆಯು ಬ್ರಿಡ್ಜ್ ಅತಿವೃಷ್ಟಿಯಿಂದ ಕೊಚ್ಚಿಹೋಗಿತ್ತು. ಅಲ್ಲಿ ಮೂವತ್ತು ಹಳ್ಳಿಗಳಿಗೂ ಇದರಿಂದ ಸಂಪರ್ಕವಿಲ್ಲ. ಇದು ಬಹಳ ಮಹತ್ವದ ರಸ್ತೆ ಸಂಪರ್ಕ, ಮುಖ್ಯಮಂತ್ರಿಯವರು ಬಂದು ಭರವಸೆಯನ್ನು ಕೊಟ್ಟು ಹೋದ್ದಾರೆ. ಆದರೆ ಮೂರು ವರ್ಷವಾದರೂ ಅದು ಈಡೇರಲಿಲ್ಲವೆಂದರೆ ಏನು ಅರ್ಥವಾಗುತ್ತದೆ ? ಮುಖ್ಯಮಂತ್ರಿಗಳು ಬಂದು ಭರವಸೆ ಕೊಟ್ಟು ಹೋಗಿದ್ದಕ್ಕೂ ಅರ್ಥವಿಲ್ಲದಂತಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪೆಸಿಫಿಕ್ ಆಗಿ ಯಾವುದನ್ನೂ ಹೇಳಲಿಲ್ಲ. ಇದನ್ನು ಯಾವ ಯೋಜನೆಯಲ್ಲೂ ತಾವು ತೆಗೆದುಕೊಂಡಿಲ್ಲ.

ಶ್ರೀ ಧರ್ಮಸಿಂಗ್ :– ಹೇಳಿದ್ದೇನೆ, ಅದು ಅತಿಮುಖ್ಯವಾದಂಥ ರಸ್ತೆ ಈಗಾಗಲೇ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ನಬಾರ್ಡ್ ನವರ ಜೊತೆ 9th meeting ಮಾಡುತ್ತಿದ್ದೇವೆ. ಒಟ್ಟಾರೆ ಈ ವರ್ಷ 350 ಕೋಟಿ ರೂಪಾಯಿ ಪ್ರಪೋಸಲ್ ಕಳಿಸುವ ಬಗ್ಗೆ ಈಗಾಗಲೆ ನಬಾರ್ಡ್‌ನಿಂದ ಪ್ರಪೋಸಲ್ ಬಂದಿದೆ. ಅದರಲ್ಲಿ 1 ಕೋಟಿ 80 ಲಕ್ಷದ ಇದನ್ನೂ ಸೇರಿಸುತ್ತೇವೆ. ಇದರಿಂದ ಆ 30 ಹಳ್ಳಿಗಳಿಗೂ ಅನಕೂಲವಾಗುತ್ತದೆ.

ರಾಜ್ಯದಲ್ಲಿ ಅರಣ್ಯ ಹಾಗೂ ಮರಗಳನ್ನು ಬೆಳೆಸುವುದು

569(5233) **ಶ್ರೀ ಸಭಾಪತಿ ಯು.ಆರ್.** (ಉಡುಪಿ) :– ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಹೆಕ್ಟೇರ್ ಪ್ರದೇಶಗಳನ್ನು ಅರಣ್ಯ ಪ್ರದೇಶಗಳೆಂದು ಗುರುತಿಸಲಾಗಿದೆ: (ಹೆಕ್ಟೇರ್‌ಗಳಲ್ಲಿ ಜಿಲ್ಲಾವಾರು ವಿವರ ನೀಡುವುದು) :

ಆ) ಅರಣ್ಯ ಹಾಗೂ ಮರಗಳನ್ನು ಬೆಳೆಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 38,28,428 ಹೆಕ್ಟೇರ್ ಪ್ರದೇಶವನ್ನು ಅರಣ್ಯ ಪ್ರದೇಶವೆಂದು ಗುರುತಿಸಲಾಗಿದೆ.

ಅರಣ್ಯ ಪ್ರದೇಶದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರಸಕ್ತ ಸಾಲಿನಲ್ಲಿ ಅರಣ್ಯ ಭೂಮಿ, ಇತರ ಸರ್ಕಾರಿ ಭೂಮಿ ಸಾರ್ವಜನಿಕ ಹಾಗೂ ಗ್ರಾಮ ಸಮುದಾಯದ ಜಮೀನಿನಲ್ಲಿ 22,474 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪು ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ. ಒಟ್ಟು 197 ಲಕ್ಷ ಸಸಿಗಳನ್ನು ನಾಟಿ ಮಾಡಲು ಯೋಜಿಸಲಾಗಿದೆ.

ರೈತರ ಜಮೀನು, ಸಂಘ ಸಂಸ್ಥೆ, ಶಾಲಾ ಕಾಲೇಜು, ಸಾರ್ವಜನಿಕ ಖಾಸಗಿ ಜಮೀನಿನಲ್ಲಿ ನೆಡಲು 375 ಲಕ್ಷ ಸಸಿಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವನಸಂವರ್ಧನ ಯೋಜನೆಯಲ್ಲಿ ಸಾರ್ವಜನಿಕರಿಗೆ, ಸಂಘ ಸಂಸ್ಥೆಗಳಿಗೆ ಮತ್ತು ರೈತರಿಗೆ ಸಸಿಗಳನ್ನು ವಿತರಿಸಲು ಕರ್ನಾಟಕ ವನಸಂವರ್ಧನ ಟ್ರಸ್ಟ್ ಸಹಕಾರವನ್ನು ಪಡೆಯಲಾಗಿದೆ.

2003 ಜುಲೈ ಅಂತ್ಯದವರೆಗೆ ರಾಜ್ಯದ ವಿವಿಧೆಡೆ 2572 ಹೆಕ್ಟೇರ್ ಪ್ರದೇಶದಲ್ಲಿ 13.13 ಲಕ್ಷ ಸಸಿಗಳನ್ನು ನೆಡಲಾಗಿದೆ.

7 ಲಕ್ಷ ಸಸಿಗಳನ್ನು ಸಂಘ ಸಂಸ್ಥೆಗಳಿಗೆ, ರೈತರಿಗೆ ಹಾಗೂ ಸಾರ್ವಜನಿಕರಿಗೆ ವಿತರಿಸಲಾಗಿದೆ.

ಅರಣ್ಯೀಕರಣ ಕಾಮಗಾರಿಗಳನ್ನು ಜನರ ಸಹಭಾಗಿತ್ವದಲ್ಲಿ ನಿರ್ವಹಿಸಲು ರಾಜ್ಯದಲ್ಲಿ 30 ಅರಣ್ಯ ಅಭಿವೃದ್ಧಿ ಸಂಸ್ಥೆಗಳನ್ನು (Forest Development Agency) ನೊಂದಾಯಿಸಲಾಗಿದೆ. ಈ ಯೋಜನೆಯಲ್ಲಿ ಗ್ರಾಮ ಅರಣ್ಯ ಸಮಿತಿಗಳು ಪ್ರಮುಖ ಪಾತ್ರ ವಹಿಸುತ್ತವೆ.

ವಿವಿಧ ಯೋಜನೆಗಳಲ್ಲಿ ರಾಜ್ಯದಲ್ಲಿ ಒಟ್ಟು 3,688 ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಅರಣ್ಯೀಕರಣಕ್ಕಾಗಿ ಒಟ್ಟು 9,555.83 ಲಕ್ಷ ರೂ.ಗಳನ್ನು ಒದಗಿಸುವ ಗುರಿ ಇದೆ.

ಅನುಬಂಧ (LAQ-5233)

ಜಿಲ್ಲೆ	ಅರಣ್ಯ ಪ್ರದೇಶದ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2
ಬೆಂಗಳೂರು (ಗ್ರಾಮಾಂತರ)	109438
ಬೆಂಗಳೂರು (ನಗರ)	7364
ಬೆಳಗಾಂ	224557
ಬಳ್ಳಾರಿ	174353
ಬೀದರ್	48231
ಬಿಜಾಪುರ	82758
ಬಾಗಲಕೋಟೆ	

1	2
ಚಿಕ್ಕಮಗಳೂರು	217908
ಚಿತ್ರದುರ್ಗ	156229
ದಾವಣಗೆರೆ	
ದಕ್ಷಿಣ ಕನ್ನಡ	518130
ಉಡುಪಿ	
ಧಾರವಾಡ	
ಗದಗ	143673
ಹಾವೇರಿ	
ಗುಲ್ಬರ್ಗಾ	113785
ಹಾಸನ	54107
ಕೊಡಗು	125952
ಕೋಲಾರ	103941
ಮಂಡ್ಯ	27279
ಮೈಸೂರು	412962
ಚಾಮರಾಜನಗರ	
ರಾಯಚೂರು	65075
ಕೊಪ್ಪಳ	
ಶಿವಮೊಗ್ಗ	327016
ತುಮಕೂರು	86517
ಉತ್ತರ ಕನ್ನಡ	829153
ಒಟ್ಟು	**38,28,428**

ಶ್ರೀ ಯು.ಆರ್. ಸಭಾಪತಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ವರ್ಷ 1 ಕೋಟಿ 97 ಲಕ್ಷ ಸಸಿಗಳನ್ನು ನಾಟಿ ಮಾಡುವ ಗುರಿ ಇದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಕಳೆದ ಎರಡು ಮೂರು ವರ್ಷದಲ್ಲಿ ಲಕ್ಷಾಂತರ ಸಸಿ ನೆಡುವ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಮಾಡಿದೆ. ಆದರೆ, ನೀಲಗಿರಿ ಸಸಿಯನ್ನು ನೆಡುವುದಾದರೆ ಕನಿಷ್ಟ ಮೂರು ವರ್ಷ ಅದರ ನಿರ್ವಹಣೆ ಮಾಡಬೇಕಾಗುತ್ತದೆ. ಅನ್ಯ ಸಸಿಗಳಾದರೆ ಕನಿಷ್ಟ ಐದು ವರ್ಷ ನಿರ್ವಾಹಣೆಯನ್ನು ಇಲಾಖೆಯವರು ಮಾಡಬೇಕಾಗುತ್ತದೆ. ಆದರೆ, ಕಳೆದ ಎರಡು ಮೂರು ವರ್ಷಗಳಿಂದ ಸಸಿಗಳ ನಿರ್ವಹಣೆಗೆ ಅನುದಾನದ ಬಿಡುಗಡೆಗೆ ಕೊರತೆ ಬಹಳ ಇದೆ. ಅನುದಾನ ಬಿಡುಗಡೆಯಾಗದಿದ್ದರೆ ಇದರ ನಿರ್ವಹಣೆಯನ್ನು ಯಾವ ರೀತಿಯಾಗಿ ಮಾಡಲು ಸಾಧ್ಯ ? ಇದರ ಬಗ್ಗೆ ಸರ್ಕಾರದ ನಿಲುವೇನು? ಅನಂತರ, ವಲಯ ಅರಣ್ಯಾಧಿಕಾರಿಯೆಂದೇನಿದ್ದಾರೆ, ಸಹಾಯಕ ಅರಣ್ಯಾಧಿಕಾರಿಗಳೇನಿದ್ದಾರೆ ಇವರುಗಳನ್ನೆಲ್ಲಾ ನಾವು ಸಂಪರ್ಕ ಮಾಡುವುದಾದರೂ ಹೇಗೆ ? ಅವರುಗಳಿಗೆ ಅಧಿಕೃತವಾದಂಥ ದೂರವಾಣಿ ಸೌಲಭ್ಯವೇ ಇಲ್ಲ. ಆದ್ದರಿಂದ ನಾವು ಅವರನ್ನು ಯಾವ ರೀತಿಯಾಗಿ ಸಂಪರ್ಕ ಮಾಡಬಹುದು ? ಯಾವ ರೀತಿಯಾಗಿ ಗೃಹ ಇಲಾಖೆಯನ್ನು ಆಧುನೀಕರಣಗೊಳಿಸಲಾಗಿದೆಯೋ

ಅದೇ ರೀತಿ ಅರಣ್ಯ ಇಲಾಖೆಯನ್ನೂ ಕೂಡ ಆಧುನೀಕರಣ ಮಾಡಲೇ ಬೇಕಾಗುತ್ತದೆ. ಅದರ ಜೊತೆಗೆ, RFO ಮತ್ತು ACF ಗಳಿಗಾಗಲಿ, ಅವರು ಯಾವ ರೀತಿಯಾಗಿ ಗಸ್ತು ಮಾಡಬೇಕು ಎಂಬುದು ಗೊತ್ತಿಲ್ಲ. ಅವರಿಗೆ ವಾಹನ ಸೌಕರ್ಯವೂ ಇಲ್ಲ. ತಿಂಗಳಿಗೆ ಐದು ನೂರು ರೂಪಾಯಿ ಪೆಟ್ರೋಲ್‌ನ ಸಂಭಾವನೆಯೆಂದು ಕೊಡುತ್ತಾರೆ. ಆ ಐದುನೂರು ರೂಪಾಯಿ ಇಟ್ಟುಕೊಂಡು ಇಷ್ಟೊಂದು ದೊಡ್ಡ ಯೋಜನೆಯನ್ನು ಯಾವ ರೀತಿಯಾಗಿ ಕಾರ್ಯರೂಪಕ್ಕೆ ತರಲು ಆಗುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರು ವಿವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಸಿಗಳನ್ನು ಕನಿಷ್ಟ ಐದು ವರ್ಷ ಸಂರಕ್ಷಣೆ ಮಾಡಬೇಕೆಂದು ಹೇಳಿದ್ದಾರೆ, ಅದು ವಾಸ್ತವಾಂಶ. ಅದಕ್ಕೆ ಹಣ ಕೂಡ ಹೆಚ್ಚು ಬೇಕಾಗುತ್ತದೆ. ಆ ದೃಷ್ಟಿಯಿಂದ ಈಗ ಸಧ್ಯ ಇರತಕ್ಕದ್ದು ಮೂರು ವರ್ಷ ಸಂರಕ್ಷಣೆ ಮಾಡತಕ್ಕ ಕಾರ್ಯಕ್ರಮ. ಆದರೆ ಅದನ್ನು ಐದು ವರ್ಷ ಮಾಡಲೇ ಬೇಕಾಗುತ್ತದೆ. ಇಲ್ಲದಿದ್ದರೆ, ನೆಟ್ಟ ಸಸಿಗಳು ನಾಶವಾಗಿಹೋಗತಕ್ಕ ಪರಿಸ್ಥಿತಿ ಇದೆ. ಇನ್ನೂ ಎರಡು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದೇನೆಂದರೆ, RFO ಗಳಿಗೆ ದೂರವಾಣಿ ಕೊಡಬೇಕು ಎಂಬುದು. ಇದು ಸ್ವಲ್ಪ ಕಷ್ಟದ ಪ್ರಶ್ನೆ ದೂರವಾಣಿ ಕೊಟ್ಟರೆ ಊರಿನಲ್ಲೇ ಇದ್ದು ಬಿಡುತ್ತಾರೆ. ಕಾಡಿಗೇ ಹೋಗುವುದಿಲ್ಲ, ವಾಹನಗಳನ್ನು ಕೊಡಬೇಕೆಂದು ಹೇಳಿದರೆ, ಈಗ ಕಾಡಿನಲ್ಲಿ ರಸ್ತೆ ಜಾಸ್ತಿಯಾಗಿ ನಮ್ಮ ಕಾಡು ಹಾಳಾಗುತ್ತಿದೆ. ಆದರೂ ಅವರು ಹೋಗಬೇಕಾಗುತ್ತದೆ. ಮೋಟರ್ ಸೈಕಲ್‌ಗೆ ಭತ್ಯೆಯನ್ನು ಕೊಡುತ್ತಿದ್ದೇವೆ, ಅದನ್ನು ಬೇಕಾದರೆ ಹೆಚ್ಚು ಮಾಡತಕ್ಕ ವ್ಯವಸ್ಥೆ ಮಾಡಬಹುದು.

ಶ್ರೀ ಯು.ಆರ್. ಸಭಾಪತಿ : ಮೂರು ವರ್ಷದಿಂದ ನಿರ್ವಾಹಣೆಯ ಅನುದಾನ ಬಿಡುಗಡೆಯಾಗಲಿಲ್ಲವೆಂಬ ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದೇನೆ. ಕಳೆದ ಎರಡು ವರ್ಷದಲ್ಲಿ ಬಿಡುಗಡೆಯಾದದ್ದು ಯಾವುದಕ್ಕೆ ಸಾಕಾಗುತ್ತದೆ ? ತಾವು 1 ಕೋಟಿ 97 ಲಕ್ಷ ಸಸಿಗಳನ್ನು ನೆಡುವ ಯೋಜನೆ ಹಾಕಿದ್ದೀರಿ ಇನ್ನು ಮೂರು ವರ್ಷಗಳಿಗೆ ಅದಕ್ಕೆ ಸೂಕ್ತವಾದ ಅನುದಾನ ಬಿಡುಗಡೆಯಾಗಬೇಕು. ಆದರೆ ಅದು ಆಗುತ್ತಿಲ್ಲ. ಆದ್ದರಿಂದ ತಾವೇನು ಸಸಿಗಳನ್ನು ನೆಡುತ್ತಿದ್ದೀರಿ ಅದು ಅರ್ಧ ಭಾಗ ನಾಶವಾಗುವಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಹೆಚ್ಚು ಅನುದಾನ ಬಿಡುಗಡೆಗೆ ತಮ್ಮ ಪ್ರಯತ್ನವೇನು ? ಬಿಡುಗಡೆ ಮಾಡುತ್ತೀರೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಐದು ವರ್ಷ ಸಸಿಗಳನ್ನು ಸಂರಕ್ಷಣೆ ಮಾಡುವುದು ಅವಶ್ಯಕವೆಂದು ಉತ್ತರದಲ್ಲಿ ಹೇಳಿದೆ. ಆದರೆ, ಹಣದ ಅಭಾವದಿಂದ ಬಜೆಟ್‌ನಲ್ಲಿ ಮೂರು ವರ್ಷ ಮಾತ್ರ ನಿರ್ವಹಣೆ ಮಾಡಲು ಅವಕಾಶವಿರುವುದಿರಂದ ಹೆಚ್ಚು ಹಣವನ್ನು ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ. ಐದು ವರ್ಷ ಏನು ಸಸಿಗಳನ್ನು ಸಂರಕ್ಷಣೆ ಮಾಡಬೇಕು ಅದರಲ್ಲಿ ಮೂರು ವರ್ಷ ಸಂರಕ್ಷಣೆ ಮಾಡತಕ್ಕಂಥದ್ದು ಇನ್ನು ಎರಡು ವರ್ಷ ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಆರಗಜ್ಞಾನೇಂದ್ರ : ಅರಣ್ಯ ಪ್ರದೇಶವೆಂದು ಎಷ್ಟು ಹೆಕ್ಟೇರ್ ಪ್ರದೇಶ ಗುರುತಿಸಿದ್ದೇವೆಂದು ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಒತ್ತುವರಿ ಮಾಡಿರುವುದನ್ನು ಕಳೆದಿದ್ದಾರೋ ಅಥವಾ ಅದನ್ನೂ ಸೇರಿಸಿ ಗುರುತಿಸಿದ್ದಾರೋ ? ಗೊತ್ತಾಗಲಿಲ್ಲ. ಇವರ ಇಲಾಖೆಯಲ್ಲಿ ಹೊಸ ಗಿಡಗಳೇನು ಸಿಗುವುದಿಲ್ಲ. ಈಗ ಸ್ವಲ್ಪ ಹದವಾದ ಮಳೆ ಬೀಳುತ್ತಿದೆ. ಇವರ ಹತ್ತಿರ ಗಿಡ ನೆಡುವುದಕ್ಕಂತೂ ಹಣವಿಲ್ಲ, ನಾವು ನೆಡೋಣ ಎಂದು ಹೋಗಿ ಕೇಳಿದರೆ, ಇವರ ಇಲಾಖೆಯಲ್ಲಿ

ಸಸಿ ಕೊಡುವುದಿಲ್ಲ, ಹಣ ಕೊಟ್ಟರೂ ಕೂಡ ನರ್ಸರಿ ಬೆಳೆಯುವುದಕ್ಕೆ ಹಣವಿಲ್ಲ, ಹಾಗಾಗಿ ಹಣ ಕೊಡುವುದಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ ಇರುವ ಅರಣ್ಯವನ್ನು ಸಂರಕ್ಷಣೆ ಮಾಡುವುದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತೀರಾ ? ನಿಮ್ಮ ಫೀಲ್ಡ್ ಲೆವೆಲ್ ಸಿಬ್ಬಂದಿಯ ಕೊರತೆ ಇದೆ, ಗಾರ್ಡ, ಫಾರೆಸ್ಟರ್, ವಾಚರ್ಸ್‌ಗಳು ಇಲ್ಲ : ಅದಕ್ಕೆ ಏನು ಮಾಡುತ್ತೀರೆನ್ನುವುದನ್ನು ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಸಸಿಗಳಿಲ್ಲವೆಂದು ಹೇಳುವುದು ಸರಿಯಲ್ಲ, ನಮ್ಮಲ್ಲಿ ಸಸಿಗಳು ಇವೆ, ಮಾನ್ಯ ಸದಸ್ಯರು ಇಲ್ಲಿಯವರೆಗೆ ನನಗೆ ಪತ್ರ ಬರೆಯಲಿಲ್ಲ, ಬರೆದಿದ್ದರೆ ಸಹಾಯ ಮಾಡುತ್ತಿದ್ದೆ.

ಶ್ರೀ ಆರಗಜ್ಞಾನೇಂದ್ರ : ರೇಂಜರ್ ಹತ್ತಿರ ಕೇಳುವುದನ್ನೆಲ್ಲಾ ಮಂತ್ರಿಗಳ ಹತ್ತಿರ ಕೇಳುವುದಕ್ಕಾಗುತ್ತದೆಯೇ, ಇನ್ನು ಮೇಲೆ ಸಸಿಗಳನ್ನು ಕೇಳಬೇಕೆಂದರೆ ರೈತರಿಗೆಲ್ಲಾ ಸಚಿವರಿಗೆ ಪತ್ರ ಬರೆಯಿರೆಂದು ಹೇಳುತ್ತೇವೆ.

ಶ್ರೀ ಕೆ.ಹೆಚ್. ರಂಗನಾಥ್ : ವನಸಂವರ್ಧನ ಯೋಜನೆಯಲ್ಲಿ ಟ್ರಸ್ಟ್ ಏನಿದೆ, ಅದರ ಸಹಕಾರದಿಂದ ಕೂಡ ಸಸಿಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೇವೆ, ಸಸಿಗಳಿವೆ, ಬಹಳ ಮಟ್ಟಿಗೆ ಅವರ ಭಾಗದಲ್ಲಿ ಇಲ್ಲದಿರುವುದು ಇರಬಹುದು, ಗೊತ್ತಿಲ್ಲ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ ಆ ಕೊರತೆಯನ್ನು ನೀಗಿಸಲು ಏನು ಸಹಾಯ ಮಾಡಬೇಕೂ ಅದನ್ನು ಮಾಡುತ್ತೇನೆ. ನಮ್ಮ ಅಧಿಕಾರಿಗಳ ಕೊರತೆ ಇರುವುದು ವಾಸ್ತವಾಂಶ, ಅದನ್ನು ರಕ್ಷಣೆ ಮಾಡುವುದಕ್ಕೆ ನಾವು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಮಂತ್ರಿಗಳು ಕಳೆದ ಮೂರು ವರ್ಷಗಳಿಂದ ಸಸ್ಯ ಸಂರಕ್ಷಣೆಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ, ಕಳೆದ ಮೂರು ವರ್ಷಗಳಿಂದ ಬರಗಾಲವಿದೆ ಕಳೆದ ಸಾರಿ ಇದೆ ಸದನದಲ್ಲಿ ಮಾನ್ಯ ಸಚಿವರು ಹೇಳಿದರು, ನಮ್ಮಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಗಿರುವ ಸಸಿಗಳು ಶೇಕಡ 5ರಷ್ಟು ಇಲ್ಲ, ಕಾರಣ ಬರಗಾಲವಿರುವುದು. ಜನರಿಗೆ ಕುಡಿಯುವುದಕ್ಕೆನೀರಿಲ್ಲ, ಸಸ್ಯಸಂರಕ್ಷಣೆಗೆಂದು ಹಣ ಪಡೆದಿದ್ದಾರೆ ಅಂತಹದ್ದರ ಬಗ್ಗೆ ತಾವೇನಾದರು ಅತ್ಯಂತ ನಿಷ್ಠೂರ, ಕಾರ್ಯತತ್ಪರತೆಯನ್ನಿಟ್ಟುಕೊಂಡಿರುವ ಸಚಿವರು, ಯಾವುದೆ ಮುಲಾಜಿಗೆ ಒಳಗಾಗದೆ, ಕಳೆದ ಮೂರು ವರ್ಷಗಳಲ್ಲಿ ಆಗಿರತಕ್ಕಂಥ ಸಸ್ಯಸಂರಕ್ಷಣೆಯ ವ್ಯವಹಾರದಲ್ಲಿ ತಾವು ಖಂಡಿತ ಇದನ್ನು ಮಾಡಿದರೆ, ಮುಂದೆ ಕೊಡುತ್ತಿರೋ, ಬಿಡುತ್ತಿರೋ, ಮುಂದೆ ಮಳೆ ಬಂದರೆ ಗಿಡ ಆಗುತ್ತದೆ, ಇಲ್ಲದಿದ್ದರೆ ಇಲ್ಲ. ಮಾನ್ಯ ಜ್ಞಾನೇಂದ್ರರವರು ಹೇಳಿರುವುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಎರಡು-ಮೂರು ವರ್ಷಗಳಾಗಿರುವಂತಹ ಸಸಿಗಳು ಸಂಪೂರ್ಣ ಹಾಳಾಗಿವೆ ಅದಕ್ಕೆ ಹಣವನ್ನು ಪಡೆದಿದ್ದಾರೆ, ಈ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಸ್ಯರಾದ ನೀಲಕಂಠಪ್ಪನವರು ಮಾಡಿರುವ ಆಪಾದನೆ ಸ್ವಲ್ಪ ಊಹೆಯಿಂದ ಕೂಡಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಬೇಕಾದರೆ ತನಿಖೆ ಮಾಡಿ, ಇದರಲ್ಲಿ ಊಹೆ ಎಲ್ಲಿಂದ ಬಂತು, ಈಗ ಎರಡು ವರ್ಷಗಳಿಂದ ಮಳೆಯಿಲ್ಲ, ಬರಗಾಲ ಸಸ್ಯ ಸಂರಕ್ಷಣೆ ಮಾಡಿದ್ದೇವೆಂದು, ಹಣ ಪಡೆದಿದ್ದಾರೆ, ಅಧಿಕಾರಿಗಳ ಪರವಾಗಿ ಏತಕ್ಕೆ ಹೇಳುತ್ತೀರಿ ತನಿಖೆ ಮಾಡಿ, ಮತ್ತೆ ಸಸ್ಯ ಸಂರಕ್ಷಣೆಗೆಂದು ಏತಕ್ಕೆ ಹಣ ಪಡೆದರು ?

ಶ್ರೀ ಕೆ.ಹೆಚ್. ರಂಗನಾಥ್ : ಮಳೆ ಇಲ್ಲದಿರುವುದು ಈ ಸದನಕ್ಕೆ ಗೊತ್ತಿದೆ, ನಾವು ಎಲ್ಲಾ ಊರುಗಳಲ್ಲಿ ಸಸಿಗಳನ್ನು ಬೆಳೆಸಿಕೊಂಡಿರುವುದಿಲ್ಲ ನರ್ಸರಿ ಎಲ್ಲಿದೆಯೊ ಅಲ್ಲಿ ಬೆಳೆಸಿದ್ದೇವೆ.

ಶ್ರೀ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ಈ ಕಷ್ಟಪರಿಸ್ಥಿತಿಗೆ ಅರಣ್ಯದ ಬಗ್ಗೆ ಹೆಚ್ಚು ಒತ್ತು ಕೊಡದಿರುವುದೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಅದೇ ಸಮಯದಲ್ಲಿ ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಉತ್ತರದಲ್ಲಿ ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯಲ್ಲಿ 9,555 ಲಕ್ಷ ಇಟ್ಟಿದ್ದೇವೆಂದು ಹೇಳಿದ್ದೀರಿ, ಅರಣ್ಯಕ್ಕೆ ಇದೇನು ಸಾಲದು, ಬಹುಶಃ ನಾವು ಹೆಚ್ಚು ಒತ್ತನ್ನು ಕೊಡದೆ ಹೋದರೆ ಇವತ್ತಿಗಿಂತ ಕಷ್ಟದ ಪರಿಸ್ಥಿತಿಗೆ ನಾವು ಬರಬೇಕಾಗುತ್ತದೆ. ಬರಗಾಲ ಬರುವುದಕ್ಕೆ ನೀರಿಲ್ಲದಂತಾಗುವುದಕ್ಕೆ, ಎಲ್ಲದಕ್ಕೂ ಅರಣ್ಯದ ಕಡೆ ನೋಡಬೇಕಾಗುತ್ತದೆ ಕಳೆದ 50 ವರ್ಷಗಳಲ್ಲಿ ಎಷ್ಟು ಒತ್ತು ಕೊಡಬೇಕೋ ಅಷ್ಟು ಕೊಟ್ಟಿಲ್ಲ, ಆ ಕಾರಣದಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ದಯವಿಟ್ಟು ಇದಕ್ಕೆ ಬಜೆಟ್ ಪ್ರಾವಿಜನ್ ಮಾಡಿಕೊಂಡು ಕನಿಷ್ಟ 500 ಕೋಟಿ ರೂಪಾಯಿಗಳನ್ನು ಈ ಯೋಜನೆಗಿಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ನಾವು ಇಟ್ಟಿರತಕ್ಕಂಥದ್ದು ಕೇಂದ್ರದಿಂದ ಬರುವ ಹಣವು ಸೇರಿ, ಸಾಲ ವಿಲ್ಲವೆನ್ನುವುದು ಪಾಸ್ತವಾಂಶ, ಆದರೆ ಹಣದ ಪರಿಸ್ಥಿತಿಯನ್ನು ನೋಡಿಕೊಂಡು ವಿಚಾರ ಮಾಡಬೇಕಾಗುತ್ತದೆ, ಶಿಕ್ಷಣ ಇಲಾಖೆಗೆ ಕಡಿಮೆ ಇದೆ, ಹೆಲ್ತ್‌ಗೆ ಕಡಿಮೆ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಶಿಕ್ಷಣ ಇಲಾಖೆ ಉಳಿಯಬೇಕಾದರೆ ನಮ್ಮ ಪರಿಸರ ಉಳಿಯಬೇಕಾದರೆ ಕುಡಿಯುವ ನೀರು ಬೇಕಾದರೆ, ಇದನ್ನು ಉಳಿಸಿಕೊಳ್ಳಬೇಕಾಗುತ್ತದೆ, ದಯವಿಟ್ಟು ಮಾಡಿ.

ಅಧ್ಯಕ್ಷರು : ಮುಂದಿನ ಪ್ರಶ್ನೆ : ಸಂಖ್ಯೆ : 5218 ರಾಜ ವೆಂಕಟಪ್ಪನಾಯಕ ನಿಮ್ಮ ಪ್ರಶ್ನೆಯನ್ನು ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಲಾಗಿದೆ.

ಶ್ರೀ ರಾಜ ವೆಂಕಟಪ್ಪನಾಯಕ : ಉತ್ತರ ತಪ್ಪಾಗಿದೆ, ಅದು ಪಿಡಬ್ಲ್ಯುಡಿಗೆ ಸಂಬಂಧಪಟ್ಟಿದ್ದು, ಆರ್‌ಡಿಪಿಆರ್‌ಗೆ ಅಲ್ಲ.

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಡಲು ತಯಾರಿದ್ದರೆ ನನ್ನದೇನೂ ಅಭ್ಯಂತರವಿಲ್ಲ, ಪ್ರಶ್ನೆಯನ್ನು ಬೇರೆ ಇಲಾಖೆಗೆ ವರ್ಗಾಯಿಸಿದಾಗ ಅವರು ಹೇಗೆ ಉತ್ತರ ಹೇಳಲಾಗುತ್ತದೆ ?

ಶ್ರೀ ರಾಜ ವೆಂಕಟಪ್ಪ ನಾಯಕ : ಮಾನ್ಯ ಮಂತ್ರಿಗಳಿಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಈಗಾಗಲೇ 5-6 ಸೇತುವೆಗಳನ್ನು ಮಾಡಿ ಕೊಟ್ಟಿದ್ದಾರೆ, ಧನ್ಯವಾದಗಳನ್ನು ಹೇಳಿ ಇನ್ನೂ ಈ ಎರಡು ಸೇತುವೆಗಳು ಹೆಬ್ಬಾಳ ಮತ್ತು ಮಂಗ್ಯಾಯಲ್ ವಿಲೇಜಿನ ಸಿ.ಡಿ.ಗಳನ್ನು ಸೇರಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ಜೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅದು ಜಲಸಂಪನ್ಮೂಲ ಇಲಾಖೆಗೆ ಬರುತ್ತದೆ ಏಕೆಂದರೆ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಾಗುವ ಸೇತುವೆ ಬಗ್ಗೆ ಮಾನ್ಯ ನೀಲಕಂಠಪ್ಪ ನವರು ಕೇಳಿದ್ದಾರೆ, ಮೂರನ್ನೂ ನಾವು ಆ ಇಲಾಖೆಗೆ ವರ್ಗಾಯಿಸಲಾಗಿದೆ. ಆದರೂ ಕೂಡ ಅದೇನಿದೆ ಅದನ್ನು ತರಿಸಿ ಉತ್ತರ ಒದಗಿಸುವ ಪ್ರಯತ್ನ ಮಾಡುತ್ತೇವೆ.